


ಇಲ್ಲದಿದ್ದಾಗ ಸುಮ್ಮನಿರಬೇಕು. ಮನೆಯಲ್ಲಿ ಹೆಂಡತಿ ಹಾಗೂ ಮಗುವಿಗೆ ಹೊಟ್ಟೆಗೆ ಹಿಟ್ಟಿಗೂ ಇಲ್ಲದೆ ಗೌಡರ ಹಟ್ಟಿಗೆ ಹೋಗುವ ರಂಗನಿಗೆ ಗೌಡರೂ ಸಿಕ್ಕುವುದಿಲ್ಲ; ಒಂದು ಹಿಡಿ ಹಿಟ್ಟೂ ಸಿಕ್ಕುವುದಿಲ್ಲ. ಅವನು ಹೊಟ್ಟೆಗೆ ಹಿಟ್ಟುಂಡು ಒಂದೆರಡು ದಿನವೇ ಕಳೆದಿವೆ. ಅಂತಹ ಪರಿಸ್ಥಿತಿಯಲ್ಲೇ ಅವನು ಗೌಡರು ಊರಿಗೆ ಹಾಕಿಸುತ್ತಿರುವ ವಿದ್ಯುತ್ ಕಂಬವನ್ನು ನೆಡುವವರಿಗೆ ನೆರವಾಗುತ್ತಾನೆ. ಗೌಡತಿ ಹೇಳಿದ ಸೌದೆ ಒಡೆಯುವ ಕೆಲಸ ಮಾಡುತ್ತಾನೆ. ಕೈಯಲ್ಲಿ ಹಿಡಿಯಷ್ಟು ಶಕ್ತಿ ಇಲ್ಲದೇ ಹೋದರೂ ಕೊಡಲಿಯನ್ನು ಎತ್ತಿ ಎತ್ತಿ ಬೀಸುತ್ತಾನೆ. ಆ ಮರವೂ ಕೂಡ ಅವನಿಗೆ ಸತಾಯಿಸುತ್ತದೆ; ಸುಲಭಕ್ಕೆ ಸೀಳುತ್ತಿಲ್ಲ. ಗಂಟುಗಂಟಾಗಿದೆ. ಕಡೆಗೆ ಕೊಡಲಿಯನ್ನು ಎತ್ತಲಾಗದೆ ಹಾಗೇ ತಲೆಸುತ್ತು ಬಂದು ಕುಸಿದು ಕೂರುತ್ತಾನೆ. ತುಸು ಹೊತ್ತು ಸುಧಾರಿಸಿಕೊಂಡು ನಿಧಾನವಾಗಿ ಎದ್ದು ಕಾಲುಗಳನ್ನು ಎಳೆಯುತ್ತ ಎಳೆಯುತ್ತ ತನ್ನ ಹಟ್ಟಿ ಸೇರುತ್ತಾನೆ. ಇಷ್ಟೇ ಕಥೆ.

ಆದರೆ ಈ ಕಥೆಯ ಶೀರ್ಷಿಕೆ ನೋಡಿದರೆ 'ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ' ಎಂದು ವಿರೋಧಾಭಾಸದಿಂದ ಕೂಡಿದೆ. ಕಥೆ ಶುರುವಾಗುವುದೇ ಮೂಡಲ ಸೀಮೆಯು ಕೊಲೆಗಳಿಗೆ ಹೆಸರುವಾಸಿಯಾಗಿರುವುದು ಎಂದು. ಆದರೆ ಕಥೆಯಲ್ಲಿ ವಾಚ್ಯರೂಪದಲ್ಲಿ ಎಲ್ಲಿಯೂ ಕೊಲೆಗಿಲೆ ನಡೆಯುವುದಿಲ್ಲ. ಆದರೆ ರಂಗ ಹಾಗೂ ಅವನ ಕುಟುಂಬದ ಕೊಲೆಯು ಕಥೆಯ ವ್ಯಂಗ್ಯಾರ್ಥವಾಗಿ ಕಡೆಗೆ ಮನಸ್ಸಿನಲ್ಲಿ ನಿಲ್ಲುತ್ತದೆ. ಅದು ಬರೀ ಒಮ್ಮೆ ಇರಿದು ಕೊಲ್ಲುವ ಕೊಲೆಯಲ್ಲ; ಬದಲಿಗೆ ಶತಶತಮಾನಗಳಿಂದ ಹಸಿವು, ಬಡತನ, ಅವಿದ್ಯೆ, ಅಸಮಾನತೆ, ಜಾತೀಯತೆ, ಮೇಲು ಕೀಳಿನಿಂದ ನಡೆಯುತ್ತಿರುವ ಕೊಲೆಯಾಗಿ ಧ್ವನಿಸತೊಡಗುತ್ತದೆ.

ಈ ಎಲ್ಲಾ ಕಾರಣಗಳಿಂದ ನನಗೆ ಲಿಂಗ ಹಾಗೂ ರಂಗನ ಪಾತ್ರಗಳು ಅಣ್ಣತಮ್ಮಂದಿರಂತೆ ಯಾವತ್ತಿಗೂ ನನ್ನ ಮನಸ್ಸಿನ ಆಳದಲ್ಲಿ ಬಹಳ ವಿಶೇಷವಾದ ಸ್ಥಾನವನ್ನು ಪಡೆದಿದ್ದಾರೆ; ಹಾಗೂ ಈಗಲೂ ಈ ಕಥೆಗಳನ್ನು ಓದುತ್ತಿದ್ದರೆ ನನ್ನ ಮನಸ್ಸು ಈ ಇಬ್ಬರಿಗಾಗಿ ಮಿಡಿಯತೊಡಗುತ್ತದೆ. ●